ಅ) 1995-96ರಲ್ಲಿ ಬಾದಾಮಿ ಹಾಗೂ ಕೆರೂರು ಪಟ್ಟಣಗಳಲ್ಲಿ ಮಸೀದಿಗಳ ರಿಪೇರಿಗಾಗಿ ಹಾಗೂ ಖಬರಸ್ಥಾನಗಳ ಅಭಿವೃದ್ಧಿಗಾಗಿ ನಿಯೋಜಿಸಲಾದ ಹಣವೆಷ್ಟು?

ಆ) ಪ್ರಸ್ತುತ ಸಾಲಿನಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳಾವುವು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು) :

ಅ) ಕಾಮಗಾರಿಗಳ ಸಂಖ್ಯೆ ಹತ್ತು ಹಣ ರೂ. 1,75,000-00

ಆ) ಇಲ್ಲಿಯವರೆಗೆ ಹಣ ನಿಯೋಜಿಸಿರುವುದಿಲ್ಲ.

ಇ) ಯಾವುದೂ ಇಲ್ಲ.

## ಪೂರಕ ಟಿಪ್ಪಣಿ

1) 1990ರಿಂದ 95ರವರೆಗೆ ಮಸೀದಿ ಹಾಗೂ ಈದ್‌ಗಾಗಳ ದುರಸ್ತಿ, ಜೀರ್ಣೋದ್ಧಾರ, ನಿರ್ಮಾಣ ಇತ್ಯಾದಿಗಳಿಗೆ ಸರ್ಕಾರವು ಬಾದಾಮಿ ತಾಲ್ಲೂಕಿನ ವಕ್ಫ ಸಂಸ್ಥೆಗಳಿಗೆ ರೂ. 1,75,000-00 ಮಂಜೂರಾಗಿದೆ.

ಅನುದಾನಗಳ ಮಂಜೂರಾತಿ ಹಾಗೂ ಬಿಡುಗಡೆ ಸಂಬಂಧಿಸಿದ ವಿವರಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

2) 1995-96ರ ಆಯವ್ಯಯದಲ್ಲಿ ರಾಜ್ಯದ ವಕ್ಫ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ ಇತ್ಯಾದಿಗಳಿಗೆ ರೂ. 2.00 ಕೋಟಿ ಮಂಜೂರು ಮಾಡಲಾಗಿದೆ. ತಾಲ್ಲೂಕು ಹಾಗೂ ಜಿಲ್ಲೆಗಳಿಗೆ ಅನುದಾನಗಳ ಹಂಚಿಕೆಗೆ ಯಾವುದೇ ಅವಕಾಶ ಇರುವುದಿಲ್ಲ. ಸಕ್ಷಮ ಪ್ರಾಧಿಕಾರದಿಂದ ಅನುಮೋದಿತ ಅಂದಾಜು ಹಾಗೂ ನಕ್ಷೆಗಳೊಂದಿಗೆ ಸ್ವೀಕರಿಸಿದ ಬೇಡಿಕೆಗಳ ಮೇರೆಗೆ ವಕ್ಫ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲಾಗುತ್ತದೆ.

**ಏಕರೂಪ ವಾಣಿಜ್ಯ ತೆರಿಗೆ ಕಾಯಿದೆ ಜಾರಿ ಮತ್ತು ತೆರಿಗೆ ಸಂಗ್ರಹಣೆ.**

673 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಏಕರೂಪ ವಾಣಿಜ್ಯ ತೆರಿಗೆ ಕಾಯಿದೆಯನ್ನು ರಾಜ್ಯದಲ್ಲಿ ಯಾವ ವರ್ಷದಿಂದದ ಜಾರಿಗೆ ತರಲಾಗಿದೆ, ಅಂದಿನಿಂದ ಇಂದಿನವರೆಗೂ ವಾರ್ಷಿಕ ತೆರಿಗೆ ಸಂಗ್ರಹಣ ಗುರಿ ಎಷ್ಟು. ಮುಟ್ಟಿದೆ ಭೌತಿಕ ಗುರಿ ಎಷ್ಟು?

ಆ) ವಾಣಿಜ್ಯ ತೆರಿಗೆ ಇಲಾಖೆಯ ವಿವಿಧ ಶ್ರೇಣಿಯ ಅಧಿಕಾರಿಗಳ ಕಛೇರಿಗಳ ಹಾಗೂ ಬಾಡಿಗೆ ಕಟ್ಟಡಗಳಿಗಾಗಿ ಪ್ರತಿ ವರ್ಷ ಬಾಡಿಗೆ ರೂಪದಲ್ಲಿ ಸಂದಾಯ ಮಾಡುತ್ತಿರುವ ಹಣವೆಷ್ಟು?

ಇ) ರಾಜ್ಯದ ವ್ಯಾಪಾರ ವಹಿವಾಟು ಪಕ್ಕದ ಯಾವ ಯಾವ ರಾಜ್ಯದ ಜೊತೆಗೆ ಶೇಕಡ ಯಾವ ಯಾವ ಪ್ರಮಾಣದಲ್ಲಿದೆ (ವಿವರಗಳನ್ನು ಒದಗಿಸುವುದು)?

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ಏಕರೂಪ ವಾಣಿಜ್ಯ ತೆರಿಗೆ ಕಾಯಿದೆಯನ್ನು ರಾಜ್ಯದಲ್ಲಿ 1-4-93 ರಿಂದ ಜಾರಿಗೆ ತರಲಾಗಿದೆ, ಅಂದಿನಿಂದ ಇಂದಿನವರೆಗೆ ವಾಣಿಜ್ಯ ತೆರಿಗೆ ಸಂಗ್ರಹಣೆ ಗುರಿ ಹಾಗೂ ಮುಟ್ಟಿದ ಭೌತಿಕ ಗುರಿ ಕೆಳಕಂಡಂತಿದೆ :

| ನಿಗಧಿತ ಗುರಿ (ಕೋಟಿ .ರೂ.ಗಳಲ್ಲಿ) | | ಸಂಗ್ರಹಣೆ (ಕೋಟಿ .ರೂ.ಗಳಲ್ಲಿ) |
|---|---|---|
| 1993-94 | 2621.00 | 2577.58 |
| 1994-95 | 2914.00 | 2833.82 (ತಾತ್ಕಾಲಿಕ) |

ಆ) ವರ್ಷಕ್ಕೆ ರೂ. 1,84,04,556.00

ಇ) ಮಾಹಿತಿಯನ್ನು ಸಂಗ್ರಹಸಲಾಗುತ್ತಿದೆ.

**ಅಬಕಾರಿ ಇಲಾಖೆಗೆ ಬರಬೇಕಾದ ಕಿಸ್ತು.**

666 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*1) ಕಳೆದ 7 ತಿಂಗಳುಗಳಿಂದ ಅಬಕಾರಿ ಬಾಬ್ತು ಸರ್ಕಾರಕ್ಕೆ ಬರಬೇಕಾದ ಕಿಸ್ತು ಎಷ್ಟು? (ಪ್ರತಿ ತಿಂಗಳು ವಸೂಲಾದ ಕಿಸ್ತು ಎಷ್ಟು ಎಂಬ ವಿವರಗಳನ್ನು ಒದಗಿಸುವುದು)*

*2) ಅಬಕಾರಿ ಹರಾಜು ಪ್ರತಿ ಜಿಲ್ಲೆಗಳಲ್ಲಿ ಕಳೆದ ವರ್ಷದಲ್ಲಿ ಎಷ್ಟು ಆಗಿತ್ತು. ಈ ವರ್ಷದಲ್ಲಿ ಎಷ್ಟು ಆಗಿದೆ (ಜಿಲ್ಲಾವಾರು ವಿವರರನ್ನು ಒದಗಿಸುವುದು)*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು):

ಅ) ಕಳೆದ ಏಳು ತಿಂಗಳುಗಳಿಂದ ಬರಬೇಕಾದ ಸಾರಾಯಿ ಅಂಗಡಿಗಳ ಕಿಸ್ತು ರೂ. 271.61 ಕೋಟಿ. ಕಳೆದ ಏಳು ತಿಂಗಳಿಂದ ವಸೂಲಾದ ಕಿಸ್ತು ವಿವರ ಕೆಳಗಿನಂತಿದೆ.

| ತಿಂಗಳು | ವಸೂಲಾದ ಕಿಸ್ತು ಕೋಟಿ ರೂ.ಗಳಲ್ಲಿ |
|---|---|
| ಜನವರಿ 95 | 44.45 |
| ಫೆಬ್ರವರಿ 95 | 36.02 |
| ಮಾರ್ಚ್ 95 | 94.04 |
| ಏಪ್ರಿಲ್ 95 | 16.67 |
| ಮೇ 95 | 15.98 |
| ಜೂನ್ 95 | 32.16 |
| ಜುಲೈ 95 | 48.01 |
| ಒಟ್ಟು ರೂ. | 287.33 ಕೋಟಿ |

(ಇದರಲ್ಲಿ ಹಿಂದಿನ ಬಾಕಿಯೂ ಸೇರಿದೆ)